ಉಪಯೋಗಕ್ಕಾಗಿ ಸರ್ಕಾರದ ವತಿಯಿಂದ ಒದಗಿಸಲಾಗುವುದೆಂದು ತಿಳಿಸಲಾಗಿತ್ತು.

ಆ) ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಲೋಇ 59 ಪಿಎಸ್‌ಪಿ 2008, ದಿನಾಂಕ: 27.8.2008ರಲ್ಲಿ ಖರೀದಿಸಲಾದ 4 ನಾವೆಗಳಲ್ಲಿ ಒಂದು ನಾವೆಯನ್ನು ಕಾತರಕಿ, ಗುಡ್ಲಾನೂರು ಮತ್ತು ತಿಗರಿ ಪಂಚಾಯಿತಿ ವ್ಯಾಪ್ತಿಗೆ ನೀಡಲಾಗಿರುತ್ತದೆ.

ಇ) ರಾಜ್ಯದ ವಿವಿಧ ಭಾಗಗಳಿಂದ ನಾವೆಗಳನ್ನು ಒದಗಿಸುವಂತೆ ಕೋರಿಕೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಲೋಕೋಪಯೋಗಿ ಇಲಾಖೆಯ ರಸ್ತೆಗಳ ಡಾಂಬರೀಕರಣದ ಗುಣಮಟ್ಟ

260 (644) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಿಂದ ಡಾಂಬರೀಕರಣ ಗೊಳ್ಳುವ ರಸ್ತೆಗಳಿಗೆ ಡಾಂಬರ್‌ನ್ನು ಉಪಯೋಗಿಸಲು ಸರ್ಕಾರ ನಿಗದಿಪಡಿಸಿದ ಪ್ರಮಾಣವೆಷ್ಟು ;

ಆ) ಕೆಲವು ಕಡೆ ಡಾಂಬರೀಕರಣಗೊಂಡ ರಸ್ತೆಗಳು ಕೆಲವೇ ತಿಂಗಳುಗಳಲ್ಲಿ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಉಪಯೋಗಿಸುವ ಡಾಂಬರಿನ ಗುಣಮಟ್ಟದ ಬಗ್ಗೆ ತಜ್ಞರ ಅಭಿಪ್ರಾಯ ಪಡೆಯಲಾಗುತ್ತಿದೆಯೇ ; (ವಿವರ ನೀಡುವುದು) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಆಯಾ ರಸ್ತೆಗಳಲ್ಲಿನ ವಾಹನ ಸಾಂದ್ರತೆಯನುಸಾರ

ಐ.ಆರ್.ಸಿ. ನಿಯಮಾವಳಿಯಂತೆ ಬಿ.ಎಂ., ಡಿ.ಬಿ.ಎಂ., ಎಂ.ಎಸ್.ಎಸ್., ಎಸ್.ಡಿ.ಬಿ.ಸಿ., ಬಿ.ಸಿ. ಗಳಿಂದ ಡಾಂಬರೀಕರಣಗೊಳಿಸಲು ನಿಗದಿಸಿದ ಕ್ರಸ್ಟ್ ದಪ್ಪಕ್ಕನುಸಾರವಾಗಿ ಹಾಗೂ ದರಪಟ್ಟಿಯಲ್ಲಿ ನಿಗದಿಸಲಾಗಿರುವ ಡಾಂಬರ್ ಪ್ರಮಾಣದ ವಿಶಿಷ್ಟ ವಿವರಣೆಯಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಇತ್ತೀಚೆಗೆ ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ. ಡಾಂಬರೀಕರಣ ಕಾಮಗಾರಿಗಳನ್ನು ಕೈಗೊಳ್ಳುವ ಪೂರ್ವದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರು ಬಳಸುವ ಡಾಂಬರ್‌ನ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಪಡೆದು ಇಲಾಖೆಗೆ ಸಲ್ಲಿಸುತ್ತಿರುತ್ತಾರೆ. ಕಾಮಗಾರಿಗಳು ಕಾರ್ಯಗತಗೊಳ್ಳುತ್ತಿರುವ ಸಂದರ್ಭದಲ್ಲಿ ಇಲಾಖೆಯ ಗುಣನಿಯಂತ್ರಣ ವಿಭಾಗದ ಅಧಿಕಾರಿಗಳು ಎಲ್ಲಾ ಅಂಶದ ಗುಣಮಟ್ಟದ ಬಗ್ಗೆ ಪರೀಕ್ಷಿಸುತ್ತಿದ್ದು, ಸಂದರ್ಭಕ್ಕೆ ತಕ್ಕಂತೆ ಅವಶ್ಯ ಸೂಚನೆಗಳನ್ನು ನೀಡುತ್ತಿದ್ದು, ಅದರನುಸಾರ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

A.P.M.C. ಯಾರ್ಡ್‌ಗೆ ಬರುವ ಸರಕು ತುಂಬಿದ ವಾಹನಗಳ ಪ್ರವೇಶ ಶುಲ್ಕ ನಿಗದಿ

261 (645) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಸಹಕಾರಿ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಪಿಎಂಸಿ ಯಾರ್ಡ್‌ಗಳಿಗೆ ಬರುವ ಸರಕು ತುಂಬಿದ ವಾಹನಗಳಿಗೆ ಪ್ರವೇಶ ಶುಲ್ಕವನ್ನು ನಿಗದಿಪಡಿಸುವವರು ಯಾರು ;

ಆ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಪ್ರತಿ ವರ್ಷ ಬರುತ್ತಿರುವ ಒಟ್ಟು ಹಣವೆಷ್ಟು ; (ಯಾರ್ಡ್‌ವಾರು ವಿವರ ನೀಡುವುದು)